# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 2065
ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ
ಉತ್ತರಿಸುವ ಸಚಿವರು : ಉಪ ಮುಖ್ಯಮಂತ್ರಿಗಳು ಹಾಗೂ ಸಾರಿಗೆ ಸಚಿವರು
ಉತ್ತರಿಸುವ ದಿನಾಂಕ : 27-03-2020.

<table>
<tr><th>ಕ್ರ ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ</td><td>ಇತ್ತೀಚೆಗೆ ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯಲ್ಲಿ ಬಸ್ಸುಗಳು ಹೆಚ್ಚಾಗಿ ಅಪಘಾತಕ್ಕೀಡಾಗುತ್ತಿದ್ದು, ಅಮಾಯಕ ಜನರು ಬಲಿಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;</td><td>ಬಂದಿದೆ.</td></tr>
<tr><td></td><td>ಕಳೆದ ಮೂರು ವರ್ಷಗಳ ಅವಧಿಯಲ್ಲಿ ಅಪಘಾತಕ್ಕೀಡಾದ ಬಸ್ಸುಗಳ ಸಂಖ್ಯೆ ಎಷ್ಟು;</td><td>ಕಳೆದ ಮೂರು ವರ್ಷಗಳ ಅವಧಿಯಲ್ಲಿನ ಅಪಘಾತ ಪ್ರಕರಣಗಳ ವಿವರ ಈ ಕೆಳಕಂಡಂತಿದೆ.
<table>
<tr><th>ವರ್ಷ</th><th>ಒಟ್ಟು ಅಪಘಾತ ಪ್ರಕರಣಗಳು</th></tr>
<tr><td>2017–18</td><td>293</td></tr>
<tr><td>2018–19</td><td>286</td></tr>
<tr><td>2019–20 (19.03.2020 ರವರೆಗೆ)</td><td>224</td></tr>
</table></td></tr>
<tr><td></td><td>ಈ ಅಪಘಾತದ ಹಿಂದೆ ಇರುವ ಕಾರಣಗಳೇನು;</td><td>ಅಪಘಾತದ ಕಾರಣಗಳು ಈ ಕೆಳಕಂಡಂತಿರುತ್ತವೆ.
<table>
<tr><th>ವರ್ಷ</th><th>ಚಾಲಕರ ತಪ್ಪಿನಿಂದ</th><th>ಚಾಲಕರ ಭಾಗಶಃ ತಪ್ಪಿನಿಂದ</th><th>ಇತರೆ ರಸ್ತೆ ಬಳಕೆದಾರರಿಂದ</th><th>ತಾಂತ್ರಿಕ ದೋಷ ದಿಂದ</th><th>ಒಟ್ಟು</th></tr>
<tr><td>2017–18</td><td>137</td><td>93</td><td>63</td><td>–</td><td>293</td></tr>
<tr><td>2018–19</td><td>157</td><td>66</td><td>63</td><td>–</td><td>286</td></tr>
<tr><td>2019–20 (19.03.2020 ರವರೆಗೆ)</td><td>119</td><td>65</td><td>39</td><td>1</td><td>224</td></tr>
</table></td></tr>
<tr><td></td><td>ತಾಂತ್ರಿಕ ಕಾರಣಗಳಿಂದ ಅಪಘಾತವಾಗುತ್ತಿದ್ದಲ್ಲಿ ಇದನ್ನು ನಿಯಂತ್ರಣದಲ್ಲಿಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?</td><td>ಬೆಂ.ಮ.ಸಾ.ಸಂಸ್ಥೆಯಲ್ಲಿ 2019–20ನೇ ಸಾಲಿನಲ್ಲಿ (19.03.2020 ರವರೆಗೆ) ಒಟ್ಟು 224 ಅಪಘಾತ ಪ್ರಕರಣಗಳು ದಾಖಲಾಗಿದ್ದು, ಇವುಗಳಲ್ಲಿ ಒಂದು ಅಪಘಾತ ಮಾತ್ರ ತಾಂತ್ರಿಕ ದೋಷದಿಂದ ಉಂಟಾಗಿರುತ್ತದೆ.<br><br>ಸಂಸ್ಥೆಯು ತಾಂತ್ರಿಕ ಕಾರಣಗಳಿಂದ ಅಪಘಾತಗಳನ್ನು ನಿಯಂತ್ರಿಸಲು ಕೆಳಕಂಡ ಕ್ರಮಗಳನ್ನು ಕೈಗೊಳ್ಳುತ್ತಿದೆ:<br><br>1. ವಾಹನಗಳನ್ನು ಮುನ್ನೆಚ್ಚರಿಕಾ, ನಿಯತಕಾಲಿಕ ನಿರ್ವಹಣೆಗಳಿಗೆ ಒಳಪಡಿಸಲಾಗುತ್ತಿದೆ.<br><br>2. ವಾಹನಗಳ ನಿರ್ವಹಣೆಯಲ್ಲಿನ ನ್ಯೂನ್ಯತೆಯ ಸಂಬಂಧ ಅರಿವು ಮೂಡಿಸಲು ಆಗಿಂದಾಗ್ಗೆ ಅಧಿಕಾರಿಗಳು ಘಟಕಕ್ಕೆ ಭೇಟಿ ನೀಡಿ ತಪಾಸಣೆ ನಡೆಸುತ್ತಿದ್ದು, ತಾಂತ್ರಿಕ ಸಿಬ್ಬಂದಿಗಳನ್ನು ಉದ್ದೇಶಿಸಿ ಚರ್ಚಿಸಲಾಗುತ್ತಿದೆ.</td></tr>
</table>

...2

| | | |
|---|---|---|
| | | 3. ವಾಹನಗಳಲ್ಲಿ ತಾಂತ್ರಿಕವಾಗಿ ತಂತ್ರಜ್ಞಾನದ ಮುಖೇನ ವೇಗವನ್ನು ನಿಯಂತ್ರಿಸಲಾಗಿದೆ.<br>4. ತಾಂತ್ರಿಕ ಸಿಬ್ಬಂದಿಗಳಿಗೆ ಆಗಿಂದಾಗ್ಗೆ ತರಬೇತಿ ಕೇಂದ್ರಗಳಲ್ಲಿ ಸಂಸ್ಥೆಯ ವತಿಯಿಂದ/ ವಾಹನ ತಯಾರಕರಿಂದ ತರಬೇತಿ ಆಯೋಜಿಸಲಾಗುತ್ತಿದೆ.<br>ಉತ್ತಮ ಚಾಲನಾಭ್ಯಾಸ, ಚಾಲನಾ ಕೌಶಲ್ಯಗಳನ್ನು ಉತ್ತಮಪಡಿಸಿಕೊಳ್ಳಲು, ಅನುಸರಿಸುವ ಕ್ರಮದ ಕುರಿತು ಅರಿವು ಮೂಡಿಸುವ ಸಲುವಾಗಿ ಘಟಕ ಮಟ್ಟದಲ್ಲಿ ಪ್ರತಿದಿನ ಚಾಲಕರಿಗೆ ಪಿ.ಸಿ.ಆರ್.ಎ ರವರಿಂದ ತರಬೇತಿ ನೀಡಲಾಗುತ್ತಿದೆ. |

ಸಂಖ್ಯೆ: ಟಿಡಿ 138 ಟಿಸಿಕ್ಯೂ 2020

(ಲಕ್ಷ್ಮಣ ಸಂಗಪ್ಪ ಸವದಿ)
ಉಪ ಮುಖ್ಯಮಂತ್ರಿಗಳು ಹಾಗೂ
ಸಾರಿಗೆ ಸಚಿವರು